ಕೂಡ ಒಂದಷ್ಟು ಜಪ ನಾನೇ ಮಾಡುತ್ತಿದ್ದೇನೆ" ಎಂದು ಉತ್ತರಿಸುತ್ತಿದ್ದರು.

**ಸ್ತ್ರೀಯರಲ್ಲಿ ಗೌರವ:** ಊಟಿಯಲ್ಲಿ ಬೆಳಗಿನ ವಾಯು ಸಂಚಾರದಲ್ಲಿರುವಾಗ ಕ್ರೈಸ್ತ ಸಂನ್ಯಾಸಿನಿಯೊಬ್ಬಳು ಎದುರಾದಳು. ಶಿವಾನಂದರು, 'ನಮಸ್ಕಾರ, ತಾಯಿ' ಎಂದು ಕೈ ಮುಗಿದರು. ಆದರೆ ಆ ಸಂನ್ಯಾಸಿನಿಯು 'ಹುಂ' ಎಂದು ಮುಖ ತಿರುಗಿಸಿಕೊಂಡು ಹೋದಳು. "ನೋಡಿದಿರಾ ಮಹಾರಾಜ್, ನಮಸ್ಕರಿಸಿದ್ದೇ ತಪ್ಪಾಯಿತು, ಹೇಗೆ ಅಪಮಾನಿಸಿದಳು ನೋಡಿ" ಎಂದು ಜೊತೆಯಲ್ಲಿದ್ದ ಸಂನ್ಯಾಸಿ ಹೇಳಿದರು. ಆಗ ಶಿವಾನಂದರು, "ಮಾತೆಯರೆಂದರೆ ಜಗನ್ಮಾತೆಯರಲ್ಲವೆ, ಅವರೇನು ಮಾಡಿದರೂ ನಾವು ಗೌರವಿಸಬೇಕು" ಎಂದು ತಿಳಿಯಹೇಳಿದರು.

**ದೀನದಲಿತರ ಪಕ್ಷಪಾತಿ:** ಪೂರ್ಣಹಲಧರನೆಂಬ ವೃದ್ಧ ಮೀನುಗಾರನೊಬ್ಬನಿದ್ದನು. ಅವನು ಮಠಕ್ಕೆ ಸಮೀಪದಲ್ಲೇ ಮೀನು ಹಿಡಿಯುತ್ತಿದ್ದರೂ ಹೆಚ್ಚೇನೂ ಸಿಕ್ಕುತ್ತಿರಲಿಲ್ಲ. ಅದನ್ನು ಗಮನಿಸಿದ ಶಿವಾನಂದರು, "ಅವನು ಬಡವ. ಅವನು ತರುವ ಮೀನುಗಳನ್ನು ಕೊಂಡುಕೊಳ್ಳಿ, ಹೆಚ್ಚು ಹಣ ಅವನ ಕೈಗಿಡಿ" ಎಂದು ಆಜ್ಞಾಪಿಸಿದರು. ಒಮ್ಮೆ ಮಠದ ಸಂನ್ಯಾಸಿಗಳು ಮೋಚಿಯ ಹತ್ತಿರ ಪಾದರಕ್ಷೆ ರಿಪೇರಿ ಮಾಡಿಸಿಕೊಂಡು, ಕೂಲಿಗಾಗಿ ಚರ್ಚೆ ಮಾಡುತ್ತಿದ್ದುದನ್ನು ಕಂಡ ಶಿವಾನಂದರು, "ಅಯ್ಯಾ, ಅವನು ಬಡವ, ಚೌಕಾಸಿ ಮಾಡಬೇಡಿ. ಕೇಳಿದಷ್ಟು ಕೊಟ್ಟುಬಿಡಿ" ಎಂದು ಕೂಗಿ ಹೇಳಿದರು.

ಒಮ್ಮೆ ಶಿವಾನಂದರು ದೇವಘರಕ್ಕೆ ಹೋಗಿದ್ದರು. ಅಲ್ಲಿ ಚಳಿಜ್ವರ ಬಂದು ನರಳಿದರು. ಅದು ಆಸ್ತಮಾಕ್ಕೆ ತಿರುಗಿತು. ಒಂದು ರಾತ್ರಿ ಸ್ವಾಮಿಗಳಿಗೆ ನಿದ್ರಿಸಲು ಸಾಧ್ಯವೇ ಆಗಲಿಲ್ಲ. ಮಾರನೆಯ ಬೆಳಗ್ಗೆ ತಮಗೆ ಕಾಯಿಲೆಯಾಗಿದ್ದರೂ ಎಲ್ಲರನ್ನೂ ಎಂದಿನಂತೆ ಸಂತೋಷವಾಗಿ ಮಾತನಾಡಿಸಿ, ತಮ್ಮ ಅನುಭವವನ್ನು ಹೇಳಿದರು: "ನಿನ್ನೆ ರಾತ್ರಿ ತುಂಬ ನರಳಿದೆ. ಉಸಿರು ಕಟ್ಟಿಯೇ ಹೋಗುವಂತಾಗಿತ್ತು. ಶೀತದಿಂದಾಗಿ ಮೂಗು ಸಂಪೂರ್ಣವಾಗಿ ಕಟ್ಟಿಕೊಂಡಿತ್ತು. ಜೊತೆಗೆ ಆಸ್ತಮಾ ಬೇರೆ. ಕುಳಿತರೂ, ಒರಗಿದರೂ, ಮಲಗಿದರೂ ಹಿತವಿಲ್ಲದಾಯಿತು....ಇಂದ್ರಿಯಗಳೆಲ್ಲವೂ ಕೆಲಸ ಮಾಡುವುದನ್ನು ನಿಲ್ಲಿಸುತ್ತಿವೆ, ದೇಹದಿಂದ ಜೀವ ಹೊರಟುಹೋಗುತ್ತಿದೆ ಎಂದೆನಿಸಿತು. ಏನು ಮಾಡುವುದೆಂದೇ ತಿಳಿಯದೆ ಧ್ಯಾನ ಮಾಡಲು ಆರಂಭಿಸಿದೆ. ಜೀವನದುದ್ದಕ್ಕೂ ಅಭ್ಯಾಸ ಮಾಡಿಕೊಂಡು ಬಂದ ಮುದುಕನ ಧ್ಯಾನ. ಮನಸ್ಸು ಒಳಗೇ ಲೀನವಾಯಿತು. ಆಗ ದೇಹದ ತೊಂದರೆಗಳೆಲ್ಲವೂ ಮಾಯವಾಗಿ ಮನಸ್ಸು ಪರಮಶಾಂತಿಯನ್ನು ಅನುಭವಿಸಿತು. ಹೊರಪ್ರಪಂಚದ ಬಿರುಗಾಳಿ, ಒತ್ತಡಗಳಾವುವೂ ಅಲ್ಲಿ ಬಂದು ಸೇರದಾದವು. ಆ ಸ್ಥಿತಿಯಲ್ಲಿ ಸ್ವಲ್ಪ ಹೊತ್ತು ಇದ್ದ ಮೇಲೆ ಮನಸ್ಸು ನಿಧಾನವಾಗಿ ಹೊರಪ್ರಪಂಚಕ್ಕೆ ಇಳಿದುಬಂತು."

ಶಿವಾನಂದರು ಜೀವನ್ಮುಕ್ತರಾಗಿದ್ದರು. ಸ್ಥಿತಪ್ರಜ್ಞರ ಎಲ್ಲ ಲಕ್ಷಣಗಳೂ ಅವರಲ್ಲಿ ತೋರುತ್ತಿದ್ದುವು. ದೀರ್ಘಕಾಲದ ಸಾಧನೆ ಮತ್ತು ಸೇವಾಯೋಗದಿಂದ ಅವರ ದೇಹ ಜರ್ಜರಿತವಾಯಿತು. ರಕ್ತದೊತ್ತಡ, ಆಸ್ತಮಾಗಳಿಗೆ ಗುರಿಯಾದರು. ಇಷ್ಟಾದರೂ ಶಾಂತಚಿತ್ತರಾಗಿ ನೋವನ್ನೆಲ್ಲ ನುಂಗಿಕೊಂಡು ೨೦. ೨. ೧೯೩೪ ರಂದು ಇಹಲೋಕ ವ್ಯಾಪಾರವನ್ನು ಮುಗಿಸಿ ಸದ್ಗುರುವಿನಲ್ಲಿ ಸೇರಿಹೋದರು. ತಾರಕನೆಂದರೆ ದಾಟಿಸುವವನು ಎಂದರ್ಥ. ತಾರಕರಾಗಿ ಹುಟ್ಟಿಬಂದು ತಾವು ಮೊದಲು ದಾಟಿ, ಆ ಬಳಿಕ ದಾಟ ಬಯಸಿದವರನ್ನು ದಾಟಿಸಿ ಹೊರಟುಹೋದರು.

## ಉಪದೇಶಗಳು

೧. ದೇವರನ್ನು ನಂಬಬೇಕು. ಅವನ ಸ್ಮರಣೆಯಲ್ಲಿಯೇ ಎಲ್ಲ ಕೆಲಸಗಳನ್ನು ಮಾಡಬೇಕು. "ಲೋಕದ ಕೆಲಸ ಕೈಯಲ್ಲಿರಲಿ, ದೇವರ ಹೆಸರು ಬಾಯಲ್ಲಿರಲಿ." ಸತ್ಕಾರ್ಯ ನಿರತರಾದವರಿಗೆ ದೇವರು ಸಹಾಯಕನಾಗುತ್ತಾನೆ. ದೇವರು ಬೇರೆಯಲ್ಲ, ಸದ್ಗುರು ಬೇರೆಯಲ್ಲ.

೨. ಸಂಚಾರದಲ್ಲಿ ಸುಖವೆಂಬುದು ಮರೀಚಿಕೆ, ಆದರೆ ದೇವರನ್ನು ನಂಬಿದವರಿಗೆ ಸ್ವಲ್ಪವಾದರೂ ಅದು ದಕ್ಕುತ್ತದೆ.

೩. ಅನ್ಯರಲ್ಲಿ ಸದ್ಗುಣಗಳನ್ನು ಮಾತ್ರವೇ ಅರಸಬೇಕು.

೪. ಹೋರಾಟವಿಲ್ಲದೆ ಜೀವನವಿಲ್ಲ, ಸೋಲುಗಳಿಗೆ ಎದೆಗುಂದಬಾರದು.

೫. ಹಸಿವೆಯೆಂಬುದು ವ್ಯಾಧಿ. ಆಹಾರವು ಅದಕ್ಕೆ ಔಷಧ. ಔಷಧವನ್ನು ಯಾರಾದರೂ ರಾಶಿರಾಶಿ ತೆಗೆದುಕೊಳ್ಳುತ್ತಾರೆಯೆ?

೬. ಆತ್ಮಸಾಕ್ಷಾತ್ಕಾರದ ಮೂಲಕ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು.

೭. ಈ ಯುಗದಲ್ಲಿ ಶ್ರೀರಾಮಕೃಷ್ಣ ನಾಮವೇ ಮುಕ್ತಿದಾಯಕ ಮಂತ್ರ. 'ರಾಮ' ಮತ್ತು 'ಕೃಷ್ಣ' – ಈ ಇಬ್ಬರೂ ಒಟ್ಟಿಗೆ ಸೇರಿ ಏಕಕಾಲಕ್ಕೆ ಶ್ರೀರಾಮಕೃಷ್ಣರಾಗಿ ಅವತರಿಸಿರುವರು. ನೀವು ರಾಮಕೃಷ್ಣ ಜಪ ಮಾಡಿದರೆ, ರಾಮನ ಜಪ ಮತ್ತು ಕೃಷ್ಣನ ಜಪ ಎರಡರ ಫಲವೂ ಬರುವುದು. ಅವರು ಹುಟ್ಟಿಬಂದದ್ದೇ ದುಃಖಿಗಳನ್ನು, ಪಾಪಿಗಳನ್ನು ಉದ್ಧಾರ ಮಾಡುವುದಕ್ಕೆ. ಭಗವತ್ಸಾಕ್ಷಾತ್ಕಾರಕ್ಕಾಗಿ ಅವರು ಸುಂದರವಾದ ಮಾರ್ಗವನ್ನು ಹಾಕಿಕೊಟ್ಟಿರುವರು. ●

# ಕರುಣಾಸಾಗರ ಶ್ರೀರಾಮಕೃಷ್ಣ

ಧಾರಾವಾಹಿ

ಗಿರೀಶ್‌ಚಂದ್ರ ಘೋಷ್

ಕೆಲವು ದಿನಗಳು ಕಳೆದುವು. 'ಚೈತನ್ಯಲೀಲಾ' ಎಂಬ ನನ್ನ ನಾಟಕ ಸ್ಟಾರ್ ಥಿಯೇಟರಿನಲ್ಲಿ ಪ್ರದರ್ಶಿತವಾಗುತ್ತಿತ್ತು. ಥಿಯೇಟರಿನ ಹೊರಾಂಗಣದಲ್ಲಿ ನಾನು ಅಡ್ಡಾಡುತ್ತಿದ್ದೆ. ಶ್ರೀರಾಮಕೃಷ್ಣರ ಭಕ್ತರಲ್ಲೊಬ್ಬನಾದ ಮಹೇಂದ್ರನಾಥ ಮುಖ್ಯೋಪಾಧ್ಯಾಯ ನನ್ನ ಹತ್ತಿರ ಬಂದು, "ಪರಮಹಂಸ ದೇವರು ನಾಟಕ ನೋಡಲು ಬಂದಿದ್ದಾರೆ, ನೀವು ಅವರಿಗೆ ಒಂದು ಪಾಸು ಕೊಡುವುದಾದರೆ ಒಳ್ಳೆಯದು" ಎಂದು ಹೇಳಿದನು. "ಅವರೇನೂ ಟಿಕೇಟು ಕೊಂಡುಕೊಳ್ಳಬೇಕಾಗಿಲ್ಲ, ಆದರೆ ಇತರರು ತೆಗೆದುಕೊಳ್ಳಬೇಕು" ಎಂದು ಹೇಳುತ್ತ ಅವರನ್ನು ಸ್ವಾಗತಿಸಲು ಹೋದೆನು. ಅವರು ಗಾಡಿಯಿಂದ ಇಳಿದು ಕಾಂಪೌಂಡನ್ನು ಪ್ರವೇಶಿಸುತ್ತಿದ್ದರು. ಅವರಿಗೆ ನಮಸ್ಕರಿಸಬೇಕೆಂದಿದ್ದೆ. ಅದಕ್ಕೆ ಮೊದಲು ಅವರೇ ನಮಸ್ಕಾರ ಮಾಡಿದರು. ನಾನು ನಮಸ್ಕರಿಸಿದೆ. ಅವರು ಪ್ರತಿನಮಸ್ಕಾರ ಮಾಡಿದರು. ನಾನು ತಲೆ ಬಾಗಿಸಿದೆ. ಅವರೂ ಹಾಗೆಯೇ ಮಾಡಿದರು. ಇದು ಹಾಗೆಯೇ ಮುಂದುವರಿಯಬಹುದೆಂದು, ನಾನು ಮನಸ್ಸಿನಲ್ಲಿಯೇ ನಮಸ್ಕರಿಸಿದೆ; ಅವರನ್ನು ಮಹಡಿಯ ಮೇಲಕ್ಕೆ ಕರೆದುಕೊಂಡು ಹೋಗಿ ಬಾಕ್ಸ್ ಸೀಟಿನಲ್ಲಿ ಕೂಡಿಸಿದೆ. ಅವರಿಗೆ ಗಾಳಿ ಹಾಕಲು ಒಬ್ಬ ಸೇವಕನನ್ನು ಗೊತ್ತುಮಾಡಿ, ಅನಾರೋಗ್ಯ ನಿಮಿತ್ತ ಮನೆಗೆ ಹಿಂತಿರುಗಿದೆ. ಇದು ನನ್ನ ಮೂರನೆಯ ಭೇಟಿ.

ನನ್ನ ನಾಲ್ಕನೆಯ ಭೇಟಿಯ ಬಗ್ಗೆ ಹೇಳುವುದಕ್ಕೆ ಮೊದಲು ಆ ಕಾಲದಲ್ಲಿ ದೇಶದಲ್ಲಿ ಧಾರ್ಮಿಕ ಸ್ಥಿತಿ ಹೇಗಿತ್ತೆಂದು ನಾನು ತಿಳಿಸಬೇಕು. ನನ್ನ ಶಾಲಾದಿನಗಳಲ್ಲಿ ಯಾರನ್ನು 'ಯುವ ಬಂಗಾಳ' (Young Bengal) ಎಂದು ಕರೆಯುತ್ತಿದ್ದರೊ ಅವರು ಬಂಗಾಳದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪಡೆದ ಮೊದಲಿಗರು. ಅವರಲ್ಲಿ ಬಹುಭಾಗ ಜನ ನಿರೀಶ್ವರವಾದಿಗಳು. ಅವರಲ್ಲಿ ಕೆಲವು ಮಂದಿ ಕ್ರೈಸ್ತ ಮತಕ್ಕೆ ಮತಾಂತರವಾಗಿದ್ದರು; ಕೆಲವರು ಬ್ರಾಹ್ಮ ಸಮಾಜವನ್ನು ಅಂಗೀಕರಿಸಿದ್ದರು. ಹಿಂದೂಧರ್ಮವನ್ನು ಯಾರೂ ಗೌರವಿಸುತ್ತಿರಲಿಲ್ಲ. ಹಿಂದೂಧರ್ಮದ ಸಂಪ್ರದಾಯವಾದಿಗಳು ಒಳಪಂಗಡಗಳನ್ನು ಮಾಡಿಕೊಂಡು ಹರಿದು ಹಂಚಿಹೋಗಿದ್ದರು. ಶಾಕ್ತರು ಮತ್ತು ವೈಷ್ಣವರ ನಡುವೆ ವೈಷಮ್ಯವಿತ್ತು. ವೈಷ್ಣವರಲ್ಲಿಯೂ ಅನೇಕ ಒಳಪಂಗಡಗಳಿದ್ದು, ಪ್ರತಿಯೊಬ್ಬರೂ ತಾವು ಇತರರಿಗಿಂತ ಮೇಲೆಂದು ಭಾವಿಸುತ್ತಿದ್ದರು. ಇವಲ್ಲದೆ ಇತರ ಅನೇಕ ಪಂಗಡಗಳೂ ಇದ್ದುವು. ಅವರಲ್ಲಿ ಒಬ್ಬರನ್ನೊಬ್ಬರು ಹೀಯಾಳಿಸುತ್ತಿದ್ದರು. ಇಷ್ಟೇ ಅಲ್ಲದೆ, ಬ್ರಾಹ್ಮಣ ಪುರೋಹಿತರು ಶಾಸ್ತ್ರಗಳ, ಧಾರ್ಮಿಕ ವಿಧಿಗಳ ಪರಿಜ್ಞಾನ ಇಲ್ಲದೆ ಅಧಃಪತನಕ್ಕೆ ಇಳಿದಿದ್ದರು.

ಅಲ್ಪ, ಸ್ವಲ್ಪ ಇಂಗ್ಲಿಷ್ ವ್ಯಾಸಂಗ ಮಾಡಿದ್ದ ಅಂದಿನ ಯುವಕರು ವಿಗ್ರಹಾರಾಧನೆಯಲ್ಲಿ ನಂಬಿಕೆ ಕಳೆದುಕೊಂಡಿದ್ದರು. ನಾಸ್ತಿಕರೇ ಬಹು ತಿಳಿವಳಿಕೆಯುಳ್ಳವರೆಂದು ಪರಿಗಣಿಸಲ್ಪಟ್ಟಿದ್ದರು. ದೇವರಿಲ್ಲ ಎಂಬುದೇ ವಾಕ್ಚಾತುರ್ಯ ಮತ್ತು ಪಾಂಡಿತ್ಯದ ಮುಖ್ಯ ಸಂಕೇತ ಎಂಬ ಭಾವನೆ ಆಗ ಇತ್ತು. ಆಗೊಮ್ಮೆ ಈಗೊಮ್ಮೆ, ನಾವು ದೇವರಿರಬಹುದೆಂದು ಅಂದುಕೊಳ್ಳುತ್ತಿದ್ದೆವು. ಯಾವಾಗಲಾದರೊಮ್ಮೆ ನಾನು ಬ್ರಾಹ್ಮಸಮಾಜದ ಆರಾಧನೆಗೆ ಹೋಗುತ್ತಿದ್ದೆ; ದೇವರ ಅಸ್ತಿತ್ವವನ್ನೇ ಸಂದೇಹಿಸುತ್ತಿದ್ದೆ. ಅವನು ಇರುವುದಾದರೆ ನಾನು ಯಾವ ಧರ್ಮವನ್ನು ಅನುಸರಿಸಬೇಕು ಎಂಬುದಾಗಿ ಬಹಳ ವಾದಿಸುತ್ತಿದ್ದೆ, ಆಲೋಚಿಸುತ್ತಿದ್ದೆ. ಆದರೆ ನನಗೆ ಯಾವ ರೀತಿಯ ಪರಿಹಾರವೂ ಸಿಕ್ಕಲಿಲ್ಲ. ಹೀಗೆ ನಾನು ಹದಿನಾಲ್ಕು ದೀರ್ಘ ವರ್ಷಗಳನ್ನು ಅಂಧಕಾರದ ಮುಸುಕಿನಲ್ಲಿ ಕಳೆದೆ.

ನಂತರ ದುರ್ದಿನಗಳು ಬಂದವು. ಆಗ ನನ್ನ ಮನಸ್ಸಿಗೆ ವಿಶ್ರಾಂತಿಯೇ ಇಲ್ಲ. ಒಳಗೆ, ಹೊರಗೆ ಎಲ್ಲೆಲ್ಲೂ ಅಂಧಕಾರವೇ. ಇದರಿಂದ ಪಾರಾಗಲು ಸಾಧ್ಯವೇ ಎಂದು ಆಲೋಚಿಸಿದೆ. ಯಾರಿಗಾದರೂ ವಾಸಿಯಾಗದ ಕಾಯಿಲೆ ಬಂದಾಗ ತಾರಕೇಶ್ವರದ ತಾರಕನಾಥನಲ್ಲಿ ಮೊರೆಹೋಗುವುದನ್ನು ನೋಡಿದ್ದೆ. ನನ್ನ ಸ್ಥಿತಿಯೂ ಬಹಳ ಗಂಭೀರವಾಗಿತ್ತು. ಕಷ್ಟದಿಂದ ಪಾರಾಗುವುದು ಅಸಾಧ್ಯವಾಗಿತ್ತು. ತನ್ನ ಭಕ್ತರನ್ನು ಕಾಪಾಡುವ ತಾರಕನಾಥ ಶಿವನಿಗೆ ಪ್ರಾರ್ಥಿಸಿದರೆ ನನಗೆ ಒಳ್ಳೆಯದಾಗುವುದೆ? ಇದನ್ನು ಪರೀಕ್ಷಿಸೋಣವೆಂದು ನಿರ್ಧಾರ ಮಾಡಿದೆ. ದೇವರ ಇಚ್ಛೆಯಂತಾಗಲಿ ಎಂದು ಮನಸ್ಸು ಮಾಡಿದೆ. ನನ್ನ ಪ್ರಯತ್ನ ಫಲಿಸಿತು. 'ದೇವರು ಇಲ್ಲದೆ ಇಲ್ಲ' ಎಂದು ನಂಬತೊಡಗಿದೆ.

ಅನುಮಾನದ ಅಪಾಯದಿಂದಲೇನೊ ಪಾರಾದೆ, ಆದರೆ ಎಂದೆಂದಿಗೂ ಬಿಡುಗಡೆಯಾಗಬೇಕಾದರೆ ಇದೇ ದಾರಿಯೇನು? ಎತ್ತ ಹೋಗಬೇಕೆಂಬುದು ತಿಳಿಯಲಿಲ್ಲ. ತಾರಕನಾಥನ ಮಹಿಮೆಯನ್ನೇನೊ ನೋಡಿದೆ. ಅವನನ್ನೇ ಮತ್ತೊಮ್ಮೆ ಏಕೆ ಪ್ರಾರ್ಥಿಸಬಾರದು? ಕ್ರಮೇಣ ದೇವರಲ್ಲಿ ನಂಬಿಕೆ ಬೆಳೆಯಲಾರಂಭಿಸಿತು. ಆದರೆ ಗುರುವಿಲ್ಲದೆ